# ಧರ್ಮಾರ್ಥ ದತ್ತಿ ಅಧಿನಿಯಮ, 1890

**(1890ರ ಅಧಿನಿಯಮ ಸಂಖ್ಯೆ 6)**

**[17-9-2001ರ ಭಾರತ ರಾಜಪತ್ರದ IX ನೇ ಭಾಗದ, 1ನೇ ವಿಭಾಗದ, 20ನೇ ಸಂಪುಟದ, 1ನೇ ಸಂಖ್ಯೆಯ ವಿಶೇಷ ಸಂಚಿಕೆಯಲ್ಲಿ 40 ರಿಂದ 43ರ ವರೆಗಿನ ಪುಟಗಳಲ್ಲಿ ಪ್ರಕಟಿತ]**

**ಪ್ರಕರಣಗಳ ಅನುಕ್ರಮಣಿಕೆ**

**ಪ್ರಕರಣಗಳು :**


1. ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ
2. ಪರಿಭಾಷೆ
3. ಧರ್ಮಾರ್ಥ ದತ್ತಿಗಳ ಖಜಾಂಚಿಯ ನೇಮಕಾತಿ ಮತ್ತು ನಿಗಮನ

3-ಎ. "ಸಮುಚಿತ ಸರ್ಕಾರ"ದ ಪರಿಭಾಷೆ, ಇತ್ಯಾದಿ

4. ಖಜಾಂಚಿಯಲ್ಲಿ ಸ್ವತ್ತನ್ನು ನಿಹಿತಗೊಳಿಸುವ ಆದೇಶಗಳು
5. ಖಜಾಂಚಿಯಲ್ಲಿ ನಿಹಿತಗೊಂಡ ಸ್ವತ್ತಿನ ವಹಿವಾಟಿಗಾಗಿ ಯೋಜನೆಗಳು
6. ನಿಹಿತಗೊಳಿಸುವ ಆದೇಶಗಳು ಮತ್ತು ಯೋಜನೆಗಳಿಗಾಗಿ ಅರ್ಜಿಯನ್ನು ಮಾಡಿಕೊಳ್ಳುವ ವಿಧಾನ
7. ಸ್ಥಳೀಯ ಸರ್ಕಾರದ ಅಧಿಕಾರಗಳನ್ನು ಗವರ್ನರ್ ಜನರಲ್ ಇನ್ ಕೌನ್ಸಿಲ್ಲನು ಚಲಾಯಿಸುವುದು
8. ಖಜಾಂಚಿಯ ಕೇವಲ ನ್ಯಾಸಧಾರಿತ್ವ
9. ಖಜಾಂಚಿಯಲ್ಲಿ ನಿಹಿತವಾದ ಸ್ವತ್ತುಗಳ ಪಟ್ಟಿಯ ವಾರ್ಷಿಕ ಪ್ರಕಟಣೆ
10. ಖಜಾಂಚಿಯ ಪ್ರಕಾರ್ಯಗಳು ಮತ್ತು ಅಧಿಕಾರಗಳ ಪರಿಮಿತಿ
11. ಕೆಲವು ಆಕಸ್ಮಿಕ ಸಂದರ್ಭಗಳಲ್ಲಿ ಖಜಾಂಚಿಯ ಪದವನ್ನು ಮುಂದುವರಿಸುವುದಕ್ಕಾಗಿನ ಉಪಬಂಧಗಳು
12. ಒಬ್ಬ ಖಜಾಂಚಿಯಿಂದ ಇನ್ನೊಬ್ಬ ಖಜಾಂಚಿಗೆ ಸ್ವತ್ತಿನ ವರ್ಗಾವಣೆ
13. ನಿಯಮ ರಚನಾಧಿಕಾರ
14. ಸರ್ಕಾರ ಮತ್ತು ಖಜಾಂಚಿಗೆ ರಕ್ಷಣೆ
15. ಅಡ್ವೋಕೇಟ್ ಜನರಲ್ ಮತ್ತು ಅಫಿಷಿಯಲ್ ಟ್ರಸ್ಟಿಗೆ ಸಂಬಂಧಿಸಿದಂತೆ ಉಳಿಸುವಿಕೆ
16. ಗೌವರ್ನರ್ ಜನರಲ್ ಇನ್ ಕೌನ್ಸಿಲ್ಲಿನ ಸಾಮಾನ್ಯ ನಿಯಂತ್ರಣ ಅಧಿಕಾರ.

# ಧರ್ಮಾರ್ಥ ದತ್ತಿ ಅಧಿನಿಯಮ, 1890

## (1890ರ ಅಧಿನಿಯಮ ಸಂಖ್ಯೆ 6)

[1890ರ ಮಾರ್ಚ್ 7]

ಧರ್ಮಾರ್ಥ ಉದ್ದೇಶಗಳಿಗಾಗಿ ನ್ಯಾಸವಾಗಿ ಧಾರಣ ಮಾಡಿದ ಸ್ವತ್ತನ್ನು ನಿಹಿತಗೊಳಿಸುವ ಮತ್ತು ಅದರ ಆಡಳಿತಕ್ಕಾಗಿ ಉಪಬಂಧಿಸುವ ಅಧಿನಿಯಮ.

ಧರ್ಮಾರ್ಥ ಉದ್ದೇಶಗಳಿಗಾಗಿ ನ್ಯಾಸವಾಗಿ ಧಾರಣ ಮಾಡಿದ ಸ್ವತ್ತನ್ನು ನಿಹಿತಗೊಳಿಸುವುದು ಮತ್ತು ಅದರ ಆಡಳಿತಕ್ಕಾಗಿ ಉಪಬಂಧಿಸುವುದು ವಿಹಿತವಾಗಿರುವುದರಿಂದ;

ಈ ಮೂಲಕ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕುದು:-

**1. ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.**- (1) ಈ ಅಧಿನಿಯಮವನ್ನು ಧರ್ಮಾರ್ಥ ದತ್ತಿ ಅಧಿನಿಯಮ, 1890 ಎಂದು ಕರೆಯತಕ್ಕುದು.

(2) ಇದು ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಹೊರತುಪಡಿಸಿ, ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ ; ಮತ್ತು

(3) ಇದು 1890ರ ಆಕ್ಟೋಬರ್ ಮೊದಲನೇ ದಿವಸದಂದು ಜಾರಿಗೆ ಬರತಕ್ಕುದು.

**2. ಪರಿಭಾಷೆ.**- ಈ ಅಧಿನಿಯಮದಲ್ಲಿ, "ಧರ್ಮಾರ್ಥ" ಉದ್ದೇಶ ಎಂಬುದು, ಬಡವರ ಪರಿಹಾರ, ಶಿಕ್ಷಣ, ವೈದ್ಯಕೀಯ ಪರಿಹಾರ ಮತ್ತು ಸಾಮಾನ್ಯ ಸಾರ್ವಜನಿಕ ಉಪಯೋಗದ ಯಾವುದೇ ಇತರ ಉದ್ದೇಶದ ಅಭಿವೃದ್ಧಿಯನ್ನು ಒಳಗೊಳ್ಳುತ್ತದೆ. ಆದರೆ ಅದು ಯಾವ ಉದ್ದೇಶವು ಧಾರ್ಮಿಕ ಬೋಧನೆ ಅಥವಾ ಆರಾಧನೆಗೆ ಸಂಬಂಧಪಡುವುದೋ ಆ ಉದ್ದೇಶವನ್ನು ಒಳಗೊಳ್ಳುವುದಿಲ್ಲ.

**3. ಧರ್ಮಾರ್ಥ ದತ್ತಿಗಳ ಖಜಾಂಚಿಯ ನೇಮಕಾತಿ ಮತ್ತು ನಿಗಮನ.**-(1) ಕೇಂದ್ರ ಸರ್ಕಾರವು ಸರ್ಕಾರದ ಒಬ್ಬ ಅಧಿಕಾರಿಯನ್ನು ಅವನ ಪದದ ಹೆಸರಿನ ಮೂಲಕ ಭಾರತಕ್ಕಾಗಿ ಧರ್ಮಾರ್ಥ ದತ್ತಿಗಳ ಖಜಾಂಚಿಯಾಗಿರಲು ನೇಮಕ ಮಾಡಬಹುದು, ಮತ್ತು ಯಾವುದೇ ರಾಜ್ಯದ ಸರ್ಕಾರವು, ಆ ಸರ್ಕಾರದ ಒಬ್ಬ ಅಧಿಕಾರಿಯನ್ನು ಅವನ ಪದದ ಹೆಸರಿನ ಮೂಲಕ ಆ ರಾಜ್ಯಕ್ಕಾಗಿ, ಧರ್ಮಾರ್ಥ ದತ್ತಿಗಳ ಖಜಾಂಚಿಯಾಗಿರಲು ನೇಮಕ ಮಾಡಬಹುದು.

(2) ಅಂಥ ಖಜಾಂಚಿಯು, ಈ ಅಧಿನಿಯಮದ ಅಧಿಕಾರದ ಮೇರೆಗೆ ಚರ ಅಥವಾ ಸ್ಥಿರ ಸ್ವತ್ತನ್ನು ತೆಗೆದುಕೊಳ್ಳುವ, ಧಾರಣ ಮಾಡುವ ಅಥವಾ ವರ್ಗಾವಣೆ ಮಾಡುವ ಉದ್ದೇಶಗಳಿಗಾಗಿ, ಭಾರತ ಅಥವಾ ಸಂದರ್ಭಾನುಸಾರ ರಾಜ್ಯದ ಧರ್ಮಾರ್ಥದತ್ತಿಗಳ ಖಜಾಂಚಿಯ ಹೆಸರಿನ ಮೂಲಕ ಏಕ ಸದಸ್ಯ ನಿಗಮವಾಗಿರತಕ್ಕುದು ಮತ್ತು ಅಂಥ ಖಜಾಂಚಿಯಾಗಿ ಶಾಶ್ವತ ಉತ್ತರಾಧಿಕಾರ ಮತ್ತು ನಿಗಮದ ಮೊಹರನ್ನು ಹೊಂದಿರತಕ್ಕುದು ಮತ್ತು ಅವನ ನಿಗಮಿತ ಹೆಸರಿನಲ್ಲಿ ದಾವೆಯನ್ನು ಹೂಡಬಹುದು ಮತ್ತು ದಾವೆಗೆ ಗುರಿಯಾಗಬಹುದು.

**3ಎ. "ಸಮುಚಿತ ಸರ್ಕಾರದ" ಪರಿಭಾಷೆ, ಇತ್ಯಾದಿ.**- ಈ ಅಧಿನಿಯಮದ ತರುವಾಯದ ಉಪಬಂಧಗಳಲ್ಲಿ "ಸಮುಚಿತ ಸರ್ಕಾರ," ಎಂದರೆ ಯಾವ ಧರ್ಮಾರ್ಥ ದತ್ತಿಯ ಉದ್ದೇಶಗಳು ಒಂದು ರಾಜ್ಯಕ್ಕಿಂತ ಆಚೆ ವಿಸ್ತರಿಸುವುದಿಲ್ಲವೋ ಮತ್ತು ಯಾವುದಕ್ಕೆ ಕೇಂದ್ರ ಸರ್ಕಾರದ ಕಾರ್ಯ ನಿರ್ವಾಹಕ ಅಧಿಕಾರವು ವಿಸ್ತರಿಸುವುದಿಲ್ಲವೋ ಆ ಧರ್ಮಾರ್ಥ ದತ್ತಿಗೆ ಸಂಬಂಧಿಸಿದಂತೆ ರಾಜ್ಯದ ಸರ್ಕಾರ ಮತ್ತು ಯಾವುದೇ ಇತರ ಧರ್ಮಾರ್ಥ ದತ್ತಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ.

**4. ಖಜಾಂಚಿಯಲ್ಲಿ ಸ್ವತ್ತನ್ನು ನಿಹಿತಗೊಳಿಸುವ ಆದೇಶಗಳು** .- (1) ಧರ್ಮಾರ್ಥ ಉದ್ದೇಶಕ್ಕಾಗಿ ಯಾವುದೇ ಸ್ವತ್ತನ್ನು ನ್ಯಾಸವಾಗಿ ಧಾರಣ ಮಾಡಿರುವಲ್ಲಿ ಅಥವಾ ವಿನಿಯೋಗ ಮಾಡಬೇಕಾಗಿರುವಲ್ಲಿ, ಸಮುಚಿತ ಸರ್ಕಾರವು, ಅದು ಸೂಕ್ತವೆಂದು ಯೋಚಿಸಿದರೆ, ಇಲ್ಲಿ ಇನ್ನು ಮುಂದೆ ನಮೂದಿಸಿದಂತೆ ಅರ್ಜಿಯನ್ನು ಮಾಡಿಕೊಂಡ ಮೇಲೆ ಮತ್ತು ಈ ಪ್ರಕರಣದ ಇತರ ಉಪಬಂಧಗಳಿಗೊಳಪಟ್ಟು,

ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಸಮುಚಿತ ಸರ್ಕಾರ ಮತ್ತು ಅರ್ಜಿಯನ್ನು ಮಾಡಿಕೊಳ್ಳುವ ವ್ಯಕ್ತಿ ಅಥವಾ ವ್ಯಕ್ತಿಗಳ ನಡುವೆ ಆ ಸ್ವತ್ತು ಅಥವಾ ಅದರ ಆದಾಯವನ್ನು ವಿನಿಯೋಗಿಸುವ ಬಗ್ಗೆ ಒಪ್ಪಿಕೊಳ್ಳಬಹುದಾದಂಥ ನಿಬಂಧನೆಗಳ ಮೇಲೆ ಆ ಸ್ವತ್ತು ಧರ್ಮಾರ್ಥ ದತ್ತಿಗಳ ಖಜಾಂಚಿಯಲ್ಲಿ ನಿಹಿತವಾಗತಕ್ಕುದೆಂದು ಆದೇಶಿಸಬಹುದು ಮತ್ತು ಆ ತರುವಾಯ ಆ ಸ್ವತ್ತು ತದನುಸಾರವಾಗಿ ಹಾಗೆ ನಿಹಿತವಾಗತಕ್ಕುದು.

(2) ಈ ಪ್ರಕರಣದ ಮೇರೆಗೆ ಯಾವುದೇ ಸ್ವತ್ತು ಧರ್ಮಾರ್ಥ ದತ್ತಿಗಳ ಖಜಾಂಚಿಯಲ್ಲಿ ನಿಹಿತವಾದಾಗ, ಅದಕ್ಕೆ ಸಂಬಂಧಪಟ್ಟ ಸ್ವಾಮ್ಯದ ಎಲ್ಲಾ ದಸ್ತಾವೇಜುಗಳಿಗೆ ಅವನು ಹಕ್ಕುಳ್ಳವನಾಗಿರುತ್ತಾನೆ.

(3) [* * * *]

(4) ಧರ್ಮಾರ್ಥ ದತ್ತಿಗಳ ಖಜಾಂಚಿಯಲ್ಲಿ ಸ್ವತ್ತನ್ನು ನಿಹಿತಗೊಳಿಸುವ ಈ ಪ್ರಕರಣದ ಮೇರೆಗಿನ ಆದೇಶವು, ಆ ಸ್ವತ್ತಿನ ವಹಿವಾಟನ್ನು ನಡೆಸಲು ಅವನನ್ನು ಅಗತ್ಯಪಡಿಸತಕ್ಕುದಲ್ಲ ಅಥವಾ ಅಗತ್ಯಪಡಿಸುವುದೆಂದು ಭಾವಿಸತಕ್ಕುದಲ್ಲ ಅಥವಾ ಅದರ ವಹಿವಾಟಿಗೆ ಸಂಬಂಧಿಸಿದಂತೆ ನ್ಯಾಸಧಾರಿಯ ಕರ್ತವ್ಯವನ್ನು ಅವನ ಮೇಲೆ ವಿಧಿಸತಕ್ಕುದ್ದಲ್ಲ ಅಥವಾ ವಿಧಿಸುವುದೆಂದು ಭಾವಿಸತಕ್ಕುದಲ್ಲ.

**5. ಖಜಾಂಚಿಯಲ್ಲಿ ನಿಹಿತಗೊಂಡ ಸ್ವತ್ತಿನ ವಹಿವಾಟಿಗಾಗಿ ಯೋಜನೆಗಳು** .- (1) ಇಲ್ಲಿ ಇನ್ನು ಮುಂದೆ ನಮೂದಿಸಿದಂತೆ ಅರ್ಜಿಯನ್ನು ಮಾಡಿಕೊಂಡ ಮೇಲೆ ಮತ್ತು ಅರ್ಜಿಯನ್ನು ಮಾಡಿಕೊಳ್ಳುವ ವ್ಯಕ್ತಿ ಅಥವಾ ವ್ಯಕ್ತಿಗಳ ಸಹಮತಿಯೊಂದಿಗೆ, ಸಮುಚಿತ ಸರ್ಕಾರವು, ಅದು ಸೂಕ್ತವೆಂದು ಯೋಚಿಸಿದರೆ, ಧರ್ಮಾರ್ಥ ದತ್ತಿಗಳ ಖಜಾಂಚಿಯಲ್ಲಿ ನಿಹಿತವಾಗಿರುವ ಅಥವಾ ನಿಹಿತವಾಗಬೇಕಾಗಿರುವಂಥ ಯಾವುದೇ ಸ್ವತ್ತಿನ ವಹಿವಾಟಿಗಾಗಿ ಯೋಜನೆಯನ್ನು ಸಿದ್ಧಪಡಿಸಬಹುದು ಮತ್ತು ಅಂಥ ಯೋಜನೆಯಲ್ಲಿ, ಅಂಥ ಖಜಾಂಚಿಯಲ್ಲದ ಅಥವಾ ಅವನನ್ನು ಒಳಗೊಳ್ಳದ ವ್ಯಕ್ತಿ ಅಥವಾ ವ್ಯಕ್ತಿಗಳನ್ನು ಹೆಸರು ಅಥವಾ ಪದದ ಮೂಲಕ ನೇಮಕ ಮಾಡಬಹುದು..

(2) ಇಲ್ಲಿ ಇನ್ನು ಮುಂದೆ ನಮೂದಿಸಿದಂತೆ ಅರ್ಜಿಯನ್ನು ಮಾಡಿಕೊಂಡ ಮೇಲೆ ಮತ್ತು ಆ ಅರ್ಜಿಯನ್ನು ಮಾಡಿಕೊಳ್ಳುವ ವ್ಯಕ್ತಿ ಅಥವಾ ವ್ಯಕ್ತಿಗಳ ಸಹಮತಿಯೊಂದಿಗೆ, ಸಮುಚಿತ ಸರ್ಕಾರವು, ಅದು ಸೂಕ್ತವೆಂದು ಯೋಚಿಸಿದರೆ, ಈ ಪ್ರಕರಣದ ಮೇರೆಗೆ ಸಿದ್ಧ ಪಡಿಸಿದ ಯಾವುದೇ ಯೋಜನೆಯನ್ನು ಮಾರ್ಪಾಟು ಮಾಡಬಹುದು ಅಥವಾ ಅದಕ್ಕೆ ಬದಲಾಗಿ ಇನ್ನೊಂದು ಯೋಜನೆಯನ್ನು ಪ್ರತಿಯೋಜಿಸಬಹುದು.

(3) ಈ ಪ್ರಕರಣದ ಮೇರೆಗೆ ಸಿದ್ಧಪಡಿಸಿದ, ಮಾರ್ಪಾಟು ಮಾಡಿದ ಅಥವಾ ಪ್ರತಿಯೋಜಿಸಿದ ಯೋಜನೆಯು, ಈ ಪ್ರಕರಣದ ಇತರ ಉಪಬಂಧಗಳಿಗೊಳಪಟ್ಟು, ಈ ಬಗ್ಗೆ ಸಮುಚಿತ ಸರ್ಕಾರವು ಗೊತ್ತುಪಡಿಸಬೇಕಾದ ದಿವಸದಂದು ಜಾರಿಗೆ ಬರತಕ್ಕುದು ಮತ್ತು ಅದು ಸಂಬಂಧಪಡುವಂಥ ಸ್ವತ್ತು ಧರ್ಮಾರ್ಥ ದತ್ತಿಗಳ ಖಂಜಾಚಿಯಲ್ಲಿ ನಿಹಿತವಾಗಿರುವುದು ಮುಂದುವರಿಯುವಷ್ಟರವರೆಗೆ ಅಥವಾ ಅದನ್ನು ಮಾರ್ಪಾಟು ಮಾಡುವವರೆಗೆ ಅಥವಾ ಅದಕ್ಕೆ ಬದಲಾಗಿ ಇನ್ನೊಂದು ಅಂಥ ಯೋಜನೆಯನ್ನು ಪ್ರತಿಯೋಜಿಸುವವರೆಗೆ ಜಾರಿಯಲ್ಲಿರತಕ್ಕುದು.

(4) ಅಂಥ ಯೋಜನೆಯು, ಅದು ಜಾರಿಯಲ್ಲಿ ಬಂದಾಗ, ಅದರ ವಸ್ತು ವಿಷಯಕ್ಕೆ ಸಂಬಂಧಪಟ್ಟ ಯಾವುದೇ ಡಿಕ್ರಿ ಅಥವಾ ನಿರ್ದೇಶವನ್ನು, ಅಂಥ ಡಿಕ್ರಿ ಅಥವಾ ನಿರ್ದೇಶವು ಅದಕ್ಕೆ ಯಾವುದೇ ರೀತಿಯಲ್ಲಿ ತದ್ವಿರುದ್ಧವಾಗಿರುವಷ್ಟರ ಮಟ್ಟಿಗೆ ರದ್ದುಗೊಳ್ಳತಕ್ಕುದು ಮತ್ತು ಅದರ ಸಿಂಧುತ್ವವನ್ನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸತಕ್ಕುದಲ್ಲ ಮತ್ತು ಯಾವುದೇ ನ್ಯಾಯಾಲಯವು ಆ ಯೋಜನೆಯ ಉಪಬಂಧಗಳನ್ನು ಉಲ್ಲಂಘಿಸಿ ಅಥವಾ ಅದಕ್ಕೆ ಯಾವುದೇ ರೀತಿಯಲ್ಲಿ ವಿರುದ್ಧವಾಗಿ ಅಥವಾ ಅದಕ್ಕೆ ಜೊತೆಗೂಡಿಸಿ ಆ ಯೋಜನೆಯು ಸಂಬಂಧಪಡುವಂಥ ಸ್ವತ್ತಿನ ವಹಿವಾಟಿನ ಬಗ್ಗೆ ಡಿಕ್ರಿ ಅಥವಾ ನಿರ್ದೇಶನವನ್ನು ಕೊಡತಕ್ಕುದಲ್ಲ :

ಪರಂತು, ಈ ಉಪಪ್ರಕರಣದಲ್ಲಿರುವುದು ಯಾವುದೂ, ಯೋಜನೆಯನ್ನು ಸಿದ್ಧಪಡಿಸಿದ್ದ ಸರ್ಕಾರವು ಸಮುಚಿತ ಸರ್ಕಾರವಾಗಿತ್ತೋ ಹೇಗೆ ಎಂಬ ಬಗ್ಗೆ ನ್ಯಾಯಾಲಯವು ವಿಚಾರಣೆ ಮಾಡುವುದನ್ನು ಪ್ರತಿಬಂಧಿಸುವುದೆಂದು ಅರ್ಥೈಸತಕ್ಕುದಲ್ಲ.

(5) ಅಂಥ ಯೋಜನೆಯನ್ನು ಸಿದ್ಧಪಡಿಸುವುದರಲ್ಲಿ ನ್ಯಾಸಕರ್ತನ ಇಚ್ಛೆಗಳನ್ನು, ಅವುಗಳನ್ನು ಖಚಿತಪಡಿಸಿಕೊಳ್ಳಬಹುದಾದಷ್ಟರಮಟ್ಟಿಗೆ ಮತ್ತು ಸಮುಚಿತ ಸರ್ಕಾರದ ಅಭಿಪ್ರಾಯದಲ್ಲಿ ಅವುಗಳನ್ನು ಯುಕ್ತವಾಗಿ ಜಾರಿಗೊಳಿಸಬಹುದಾದಷ್ಟರ ಮಟ್ಟಿಗೆ ಜಾರಿಗೊಳಿಸತಕ್ಕುದು.

(6) ಧರ್ಮಾರ್ಥ ದತ್ತಿಗಳ ಖಜಾಂಚಿಯಲ್ಲಿ ಈಗಾಗಲೇ ನಿಹಿತವಾಗಿಲ್ಲದ ಸ್ವತ್ತಿನ ಆಡಳಿತವು ಈ ಪ್ರಕರಣದ ಮೇರೆಗೆ ಯೋಜನೆಯನ್ನು ಸಿದ್ಧಪಡಿಸಿರುವಲ್ಲಿ, ಆ ಸ್ವತ್ತು ಹಾಗೆ ನಿಹಿತವಾಗುವವರೆಗೆ ಅದು ಜಾರಿಗೆ ಬರತಕ್ಕುದಲ್ಲ.

**6. ನಿಹಿತಗೊಳಿಸುವ ಆದೇಶಗಳು ಮತ್ತು ಯೋಜನೆಗಳಿಗಾಗಿ ಅರ್ಜಿಯನ್ನು ಮಾಡಿಕೊಳ್ಳುವ ವಿಧಾನ .–** (1) ಕೊನೆಯ ಹಿಂದೆ ಹೇಳಿದ ಎರಡು ಪ್ರಕರಣಗಳಲ್ಲಿ ಉಲ್ಲೇಖಿಸಿದ ಅರ್ಜಿಯನ್ನು ,–

(ಎ) ಆ ಸ್ವತ್ತನ್ನು ಧರ್ಮಾರ್ಥ ಉದ್ದೇಶಕ್ಕಾಗಿ ಈಗಾಗಲೇ ನ್ಯಾಸವಾಗಿ ಧಾರಣ ಮಾಡಿದ್ದರೆ, ಆಗ ಆ ನ್ಯಾಸದ ವಹಿವಾಟಿನಲ್ಲಿ ಕಾರ್ಯನಿರ್ವಹಿಸುತ್ತಿರುವ ವ್ಯಕ್ತಿ ಅಥವಾ ಹಾಗೆ ಕಾರ್ಯ ನಿರ್ವಹಿಸುತ್ತಿರುವವರು ಒಬ್ಬನಿಗಿಂತ ಹೆಚ್ಚು ವ್ಯಕ್ತಿಗಳಾಗಿರುವಲ್ಲಿ, ಆ ವ್ಯಕ್ತಿಗಳು ಅಥವಾ ಅವರಲ್ಲಿ ಹೆಚ್ಚಿನವರು; ಮತ್ತು

(ಬಿ) ಆ ಸ್ವತ್ತನ್ನು ಅಂಥ ಉದ್ದೇಶಕ್ಕಾಗಿ ನ್ಯಾಸವಾಗಿ ವಿನಿಯೋಗಿಸಬೇಕಾಗಿದ್ದರೆ ಆಗ ಹಾಗೆ ಅದನ್ನು ವಿನಿಯೋಗಿಸಲು ಉದ್ದೇಶಿಸುವ ವ್ಯಕ್ತಿ ಅಥವಾ ವ್ಯಕ್ತಿಗಳು

–ಮಾಡಿಕೊಳ್ಳತಕ್ಕುದು.

(2) ಈ ಪ್ರಕರಣದ ಉದ್ದೇಶಗಳಿಗಾಗಿ, ಧರ್ಮಾರ್ಥ ಉದ್ದೇಶಕ್ಕಾಗಿ ನ್ಯಾಸವಾಗಿ ಧಾರಣ ಮಾಡಿದ ಸ್ವತ್ತಿನ ಮೃತಪಟ್ಟ ನ್ಯಾಸಧಾರಿಯ ಕಾರ್ಯನಿರ್ವಾಹಕ ಅಥವಾ ಆಡಳಿತಗಾರನನ್ನು ನ್ಯಾಸದ ವಹಿವಾಟಿನಲ್ಲಿ ಕಾರ್ಯ ನಿರ್ವಹಿಸುತ್ತಿರುವ ವ್ಯಕ್ತಿಯೆಂಬುದಾಗಿ ಭಾವಿಸತಕ್ಕುದು.

**7. ಸ್ಥಳೀಯ ಸರ್ಕಾರದ ಅಧಿಕಾರಗಳನ್ನು ಗವರ್ನರ್ ಜನರಲ್ ಇನ್ ಕೌನ್ಸಿಲ್ಲನು ಚಲಾಯಿಸುವುದು.–** (1937ರ ಆಳವಡಿಕೆ ಆದೇಶದ ಮೂಲಕ ನಿರಸನಗೊಳಿಸಲಾಗಿದೆ).

**8. ಖಜಾಂಚಿಯ ಕೇವಲ ನ್ಯಾಸಧಾರಿತ್ವ .–** (1) ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ಧರ್ಮಾರ್ಥ ದತ್ತಿಗಳ ಖಜಾಂಚಿಯು, ಅಂಥ ಖಜಾಂಚಿಯಾಗಿ ಯಾವ ನ್ಯಾಸದ ಯಾವುದೇ ಸ್ವತ್ತು ಈ ಅಧಿನಿಯಮದ ಮೇರೆಗೆ ತತ್ಕಾಲದಲ್ಲಿ ಅವನಲ್ಲಿ ನಿಹಿತವಾಗಿರುವುದೋ ಆ ಯಾವುದೇ ನ್ಯಾಸದ ವಹಿವಾಟಿನಲ್ಲಿ ಕಾರ್ಯ ನಿರ್ವಹಿಸತಕ್ಕುದಲ್ಲ.

(2) ಅಂಥ ಖಜಾಂಚಿಯು ಹಣಕ್ಕಾಗಿನ ಭದ್ರತಾ ಪತ್ರಗಳನ್ನು ಆ ಸ್ವತ್ತು ಒಳಗೊಂಡಿರುವಷ್ಟರ ಮಟ್ಟಿಗೆ, ತತ್ಕಾಲದಲ್ಲಿ ಹಾಗೆ ನಿಹಿತವಾದ ಪ್ರತಿಯೊಂದು ಸ್ವತ್ತಿನ ಬಗ್ಗೆ ಪ್ರತ್ಯೇಕ ಲೆಕ್ಕವನ್ನು ಇಡತಕ್ಕುದು ಮತ್ತು ಆ ಸ್ವತ್ತು ಅಥವಾ ಅದರ ಆದಾಯವನ್ನು 4ನೇ ಪ್ರಕರಣದ ಮೇರೆಗಿನ ನಿಹಿತಗೊಳಿಸುವ ಆದೇಶದಲ್ಲಿ ಅಥವಾ 5ನೇ ಪ್ರಕರಣದ ಮೇರೆಗಿನ ಯೋಜನೆ ಯಾವುದಾದರೂ ಇದ್ದರೆ ಅದರಲ್ಲಿ ಅಥವಾ ಅವೆರಡೂ ದಸ್ತಾವೇಜುಗಳಲ್ಲಿ ಈ ಬಗ್ಗೆ ಮಾಡಿರುವ ವ್ಯವಸ್ಥೆಗನುಸಾರವಾಗಿ ವಿನಿಯೋಗಿಸತಕ್ಕುದು.

(3) ಹಣಕ್ಕಾಗಿನ ಭದ್ರತಾ ಪತ್ರಗಳನ್ನು ಹೊರತುಪಡಿಸಿ ಹಾಗೆ ನಿಹಿತವಾದ ಯಾವುದೇ ಸ್ವತ್ತಿನ ಸಂದರ್ಭದಲ್ಲಿ, ಅಂಥ ಖಜಾಂಚಿಯು, ಯಾವ ಪ್ರಾಧಿಕಾರಿಯ ಅದೇಶದ ಮೂಲಕ ಆ ಸ್ವತ್ತು ಅವನಲ್ಲಿ ನಿಹಿತವಾಯಿತೋ ಆ ಪ್ರಾಧಿಕಾರಿಯಿಂದ ಅವನು ಸ್ವೀಕರಿಸಬಹುದಾದಂಥ ಯಾವುದೇ ವಿಶೇಷ ಆದೇಶಕ್ಕೆ ಒಳಪಟ್ಟು ಆ ನ್ಯಾಸದ ವಹಿವಾಟಿನಲ್ಲಿ ಕಾರ್ಯ ನಿರ್ವಹಿಸುತ್ತಿರುವ ವ್ಯಕ್ತಿಗಳಿಗೆ ಆ ಸ್ವತ್ತು ಅವರಲ್ಲಿ

ನಿಹಿತಗೊಂಡಿದ್ದಿದ್ದರೆ ಹೇಗೋ ಹಾಗೆ ಆ ಸ್ವತ್ತಿನ ಸ್ವಾಧೀನ, ವ್ಯವಸ್ಥಾಪನೆ ಮತ್ತು ನಿಯಂತ್ರಣವನ್ನು ಹೊಂದಲು ಮತ್ತು ಅದರ ಆದಾಯವನ್ನು ವಿನಿಯೋಗಿಸಲು ಅನುಮತಿಸತಕ್ಕುದು.

**9. ಖಜಾಂಚಿಯಲ್ಲಿ ನಿಹಿತವಾದ ಸ್ವತ್ತುಗಳ ಪಟ್ಟಿಯ ವಾರ್ಷಿಕ ಪ್ರಕಟಣೆ** .- ಧರ್ಮಾರ್ಥ ದತ್ತಿಗಳ ಖಜಾಂಚಿಯು ಈ ಅಧಿನಿಯಮದ ಮೇರೆಗೆ ತತ್ಕಾಲದಲ್ಲಿ ಅವನಲ್ಲಿ ನಿಹಿತವಾಗಿರುವ ಎಲ್ಲಾ ಸ್ವತ್ತುಗಳ ಪಟ್ಟಿಯನ್ನು ಮತ್ತು ಕೊನೆಯ ಹಿಂದೆ ಹೇಳಿದ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಅವನು ಇಟ್ಟಿರುವ ಎಲ್ಲಾ ಲೆಕ್ಕಪತ್ರಗಳ ಗೋಷ್ವಾರೆಯನ್ನು ಸಮುಚಿತ ಸರ್ಕಾರವು ನಿರ್ದೇಶಿಸಬಹುದಾದಂಥ ಕಾಲದಲ್ಲಿ ಸರ್ಕಾರಿ ರಾಜಪತ್ರದಲ್ಲಿ ವಾರ್ಷಿಕವಾಗಿ ಪ್ರಕಟಿಸುವಂತೆ ಮಾಡತಕ್ಕುದು.

**10. ಖಜಾಂಚಿಯ ಪ್ರಕಾರ್ಯಗಳು ಮತ್ತು ಅಧಿಕಾರಗಳ ಪರಿಮಿತಿ**.- (1) ಧರ್ಮಾರ್ಥ ದತ್ತಿಗಳ ಖಜಾಂಚಿಯು, ಯಾವತ್ತೂ ಏಕಮಾತ್ರ ನ್ಯಾಸಧಾರಿಯಾಗಿರತಕ್ಕುದು, ಮತ್ತು ಅಂಥ ಖಜಾಂಚಿಯಾಗಿ, ಈ ಅಧಿನಿಯಮದ ಉಪಬಂಧಗಳ ಮೇರೆಗೆ ಅಲ್ಲದೆ, ಅನ್ಯಥಾ ಯಾವುದೇ ಸ್ವತ್ತನ್ನು ತೆಗೆದುಕೊಳ್ಳತಕ್ಕುದಲ್ಲ ಅಥವಾ ಧಾರಣ ಮಾಡತಕ್ಕುದಲ್ಲ, ಅಥವಾ ಆ ಉಪಬಂಧಗಳಿಗೊಳಪಟ್ಟು, ಅವನಲ್ಲಿ ನಿಹಿತವಾದ ಯಾವುದೇ ಸ್ವತ್ತನ್ನು, ಆ ಸ್ವತ್ತನ್ನು ಅವನಿಂದ ತಪ್ಪಿಸುವ ಡಿಕ್ರಿಯ ಪಾಲನೆಯಲ್ಲಿ ಅಥವಾ ಯಾರ ಆದೇಶದ ಮೂಲಕ ಆ ಸ್ವತ್ತು ಅವನಲ್ಲಿ ನಿಹಿತವಾಯಿತೋ ಆ ಪ್ರಾಧಿಕಾರಿಯು ಆ ಬಗ್ಗೆ ಹೊರಡಿಸಿದ ನಿರ್ದೇಶದ ಪಾಲನೆಯಲ್ಲಿ ಅಲ್ಲದೆ, ಯಾವುದೇ ಸ್ವತ್ತನ್ನು ವರ್ಗಾವಣೆ ಮಾಡತಕ್ಕುದಲ್ಲ.

(2) ಅಂಥ ನಿರ್ದೇಶವು ಖಜಾಂಚಿಯನ್ನು, ಅವನಲ್ಲಿ ನಿಹಿತವಾಗಿರುವ ಯಾವುದೇ ಸ್ವತ್ತನ್ನು ಮಾರಾಟ ಮಾಡಲು ಅಥವಾ ಅನ್ಯಥಾ ವಿಲೆ ಮಾಡಲು ಮತ್ತು ಆ ನಿರ್ದೇಶನವನ್ನು ಹೊರಡಿಸುವ ಪ್ರಾಧಿಕಾರಿಯ ಮಂಜೂರಾತಿಯೊಂದಿಗೆ ಆ ಸ್ವತ್ತಿನ ಮಾರಾಟ ಅಥವಾ ಇತರ ವಿಲೆಯ ಉತ್ಪತ್ತಿಗಳನ್ನು ಆ ನಿರ್ದೇಶನದಲ್ಲಿ ನಿರ್ದಿಷ್ಟಪಡಿಸಿದಂಥ ಹಣಕ್ಕಾಗಿನ ಯಾವುದೇ ಭದ್ರತೆಯಲ್ಲಿ ಅಥವಾ ಸ್ಥಿರ ಸ್ವತ್ತಿನ ಖರೀದಿಯಲ್ಲಿ ಹೂಡಲು ಅಗತ್ಯಪಡಿಸಬಹುದು.

(3) ಧರ್ಮಾರ್ಥ ದತ್ತಿಗಳ ಖಜಾಂಚಿಯಿಂದ, ಈ ಪ್ರಕರಣದ ಮೇರೆಗೆ ಸಮುಚಿತ ಸರ್ಕಾರದ ನಿರ್ದೇಶನದ ಮೂಲಕ ಯಾವುದೇ ಸ್ವತ್ತನ್ನು ತಪ್ಪಿಸಿದಾಗ, ಅದು ಅದರ ವಹಿವಾಟಿನಲ್ಲಿ ಕಾರ್ಯ ನಿರ್ವಹಿಸುತ್ತಿರುವ ವ್ಯಕ್ತಿ ಅಥವಾ ವ್ಯಕ್ತಿಗಳಲ್ಲಿ ನಿಹಿತಗೊಳ್ಳತಕ್ಕುದು ಮತ್ತು ಅದನ್ನು ಅವನು ಅಥವಾ ಅವರು, ಅಂಥ ಖಜಾಂಚಿಯು ಅದನ್ನು ಯಾವ ನ್ಯಾಸಗಳ ಮೇಲೆ ಧಾರಣ ಮಾಡಿದ್ದನೋ ಅಂಥವೇ ನ್ಯಾಸಗಳ ಮೇಲೆ ಧಾರಣ ಮಾಡತಕ್ಕುದು.

**11. ಕೆಲವು ಆಕಸ್ಮಿಕ ಸಂದರ್ಭಗಳಲ್ಲಿ ಖಜಾಂಚಿಯ ಪದವನ್ನು ಮುಂದುವರಿಸುವುದಕ್ಕಾಗಿನ ಉಪಬಂಧಗಳು**.- ಧರ್ಮಾರ್ಥ ದತ್ತಿಗಳ ಖಜಾಂಚಿಯಾಗಿರಲು ನೇಮಕಗೊಂಡ ಸರ್ಕಾರದ ಅಧಿಕಾರಿಯು ಧಾರಣ ಮಾಡಿದ್ದ ಪದವನ್ನು ರದ್ದುಗೊಳಿಸಿದರೆ ಅಥವಾ ಆ ಪದದ ಹೆಸರನ್ನು ಬದಲಾಯಿಸಿದರೆ, ಸಮುಚಿತ ಸರ್ಕಾರವು ಅದೇ ಅಧಿಕಾರಿ ಅಥವಾ ಇನ್ನೊಬ್ಬ ಸರ್ಕಾರದ ಅಧಿಕಾರಿಯನ್ನು ಅವನ ಪದದ ಹೆಸರಿನ ಮೂಲಕ ಅಂಥ ಖಜಾಂಚಿಯಾಗಿರಲು ನೇಮಕ ಮಾಡಬಹುದು ಮತ್ತು ಆಮೇಲೆ ತರುವಾಯದ ಪದದ ಧಾರಕನನ್ನು ಈ ಅಧಿನಿಯಮದ ಉದ್ದೇಶಗಳಿಗಾಗಿ ಮೊದಲಿನ ಪದದ ಧಾರಕನ ಪದದಲ್ಲಿನ ಉತ್ತರಾಧಿಕಾರಿಯಾಗಿರುವುದಾಗಿ ಭಾವಿಸತಕ್ಕುದು.

**12. ಒಬ್ಬ ಖಜಾಂಚಿಯಿಂದ ಇನ್ನೊಬ್ಬ ಖಜಾಂಚಿಗೆ ಸ್ವತ್ತಿನ ವರ್ಗಾವಣೆ** .- ಪ್ರದೇಶಗಳ ಯಾವುದೇ ಬದಲಾವಣೆಯ ಕಾರಣದಿಂದಾಗಿ ಅಥವಾ ಇಡೀ ಭಾರತಕ್ಕಾಗಿ ಅಥವಾ ಯಾವ ರಾಜ್ಯಕ್ಕಾಗಿ ಅಂಥ ಖಜಾಂಚಿಯನ್ನು ಈ ಹಿಂದೆ ನೇಮಕ ಮಾಡಲಾಗಿಲ್ಲವೋ ಆ ರಾಜ್ಯಕ್ಕಾಗಿ ಧರ್ಮಾರ್ಥ ದತ್ತಿಗಳ ಖಜಾಂಚಿಯನ್ನು ನೇಮಕ ಮಾಡಿರುವ ಕಾರಣದಿಂದಾಗಿ ಅಥವಾ ಯಾವುದೇ ಇತರ ಕಾರಣಕ್ಕಾಗಿ, ಧರ್ಮಾರ್ಥ ದತ್ತಿಗಳ ಖಜಾಂಚಿಯಲ್ಲಿ ನಿಹಿತವಾಗಿರುವ ಯಾವುದೇ ಸ್ವತ್ತು ಅಂಥ ಇನ್ನೊಬ್ಬ ಖಜಾಂಚಿಯಲ್ಲಿ ನಿಹಿತವಾಗಬೇಕೆಂದು ಕೇಂದ್ರ ಸರ್ಕಾರಕ್ಕೆ ಕಂಡುಬಂದರೆ, ಆ ಸರ್ಕಾರವು ಆ ಸ್ವತ್ತು ಹಾಗೆ ನಿಹಿತಗೊಳ್ಳತಕ್ಕುದೆಂದು ನಿರ್ದೇಶಿಸಬಹುದು ಮತ್ತು ಆ ತರುವಾಯ ಅದು ಈ ಅಧಿನಿಯಮದ ಉದ್ದೇಶಗಳಿಗಾಗಿ ಆ ಇತರ ಖಜಾಂಚಿಯಲ್ಲಿ ಮತ್ತು ಅವನ ಉತ್ತರಾಧಿಕಾರಿಗಳಲ್ಲಿ, ಈ ಅಧಿನಿಯಮದ

ಮೇರೆಗೆ ಅವನಲ್ಲಿ ಪ್ರಥಮತಃ ನಿಹಿತವಾಗಿದ್ದಿದ್ದರೆ ಹೇಗೋ ಹಾಗೆ, ಪೂರ್ಣವಾಗಿ ಮತ್ತು ಪರಿಣಾಮಕಾರಿಯಾಗಿ ನಿಹಿತವಾಗತಕ್ಕುದು.

**13. ನಿಯಮ ರಚನಾಧಿಕಾರ** .- (1) ಸಮುಚಿತ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಅಧಿನಿಯಮದೊಂದಿಗೆ ಸುಸಂಗತವಾಗಿರುವ ನಿಯಮಗಳನ್ನು,-

(ಎ) ಧರ್ಮಾರ್ಥ ದತ್ತಿಗಳ ಖಜಾಂಚಿಯಲ್ಲಿ ಈ ಅಧಿನಿಯಮದ ಮೇರೆಗೆ ನಿಹಿತವಾದ ಯಾವುದೇ ಸ್ವತ್ತಿಗೆ ಸಂಬಂಧಿಸಿದಂತೆ ಸರ್ಕಾರಕ್ಕೆ ಸಂದಾಯ ಮಾಡಬೇಕಾದ ಫೀಜನ್ನು ನಿಯಮಿಸುವುದು ;

(ಬಿ) ಪ್ರಕರಣಗಳನ್ನು ಮತ್ತು ಯಾವ ವಿಧಾನದಲ್ಲಿ ಯೋಜನೆಗಳು ಅಥವಾ ಅವುಗಳಲ್ಲಿ ಯಾವುದೇ ಮಾರ್ಪಾಟನ್ನು 5ನೇ ಪ್ರಕರಣದ ಮೇರೆಗೆ, ಅವುಗಳನ್ನು ಸಿದ್ಧಪಡಿಸುವುದು ಅಥವಾ ಮಾಡುವುದಕ್ಕೆ ಮುಂಚೆ ಪ್ರಕಟಿಸಬೇಕಾಗಿದೆಯೋ ಆ ವಿಧಾನವನ್ನು ನಿಯಂತ್ರಿಸುವುದು;

(ಸಿ) ಧರ್ಮಾರ್ಥ ದತ್ತಿಗಳ ಖಜಾಂಚಿಯು ಲೆಕ್ಕ ಪತ್ರಗಳನ್ನು ಇಡಬೇಕಾದ ನಮೂನೆಗಳು ಮತ್ತು ಅಂಥ ಲೆಕ್ಕಪತ್ರಗಳನ್ನು ಲೆಕ್ಕಪರಿಶೋಧನೆ ಮಾಡಬೇಕಾದ ವಿಧಾನವನ್ನು ನಿಯಮಿಸುವುದು ; ಮತ್ತು

(ಡಿ) ಸಾಮಾನ್ಯವಾಗಿ ಈ ಅಧಿನಿಯಮದ ಉದ್ದೇಶಗಳನ್ನು ಪರಿಣಾಮಕಾರಿಯಾಗಿಸುವುದು

-ಇವುಗಳಿಗಾಗಿ ರಚಿಸಬಹುದು.

(2) ಈ ಅಧಿನಿಯಮದ ಮೇರೆಗೆ ರಾಜ್ಯ ಸರ್ಕಾರವು ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗ ರಾಜ್ಯ ವಿಧಾನ ಮಂಡಲದ ಮುಂದೆ ಇಡತಕ್ಕುದು.

(3) ಈ ಅಧಿನಿಯಮದ ಮೇರೆಗೆ ಕೇಂದ್ರ ಸರ್ಕಾರವು ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಥವಾ ಅದಕ್ಕಿಂತ ಹೆಚ್ಚಿನ ಅಧಿವೇಶನಗಳಲ್ಲಿ ಅಡಕವಾಗಬಹುದಾದಂಥ ಒಟ್ಟು ಮೂವತ್ತು ದಿವಸಗಳ ಅವಧಿಗೆ ಇಡತಕ್ಕುದು ಮತ್ತು ಹಿಂದೆ ಹೇಳಿದ ಅಧಿವೇಶನ ಅಥವಾ ಒಂದಾದ ಮೇಲೊಂದರಂತೆ ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಲು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ನಿಯಮವು ಆ ತರುವಾಯ ಸಂದರ್ಭಾನುಸಾರ ಅಂಥ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕುದು ಅಥವಾ ಪರಿಣಾಮಕಾರಿಯಾಗಿರತಕ್ಕುದಲ್ಲ; ಆದಾಗ್ಯೂ, ಯಾವುದೇ ಅಂಥ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕುದಲ್ಲ.

**14. ಸರ್ಕಾರ ಮತ್ತು ಖಜಾಂಚಿಗೆ ರಕ್ಷಣೆ** .- ಈ ಅಧಿನಿಯಮದ ಮೇರೆಗೆ ಮಾಡಿದ ಅಥವಾ ಮಾಡಲಾಗಿದೆಯೆಂದು ತಾತ್ಪರ್ಯವಾಗುವ ಯಾವುದೇ ಕಾರ್ಯಕ್ಕೆ ಸಂಬಂಧಿಸಿದಂತೆ ಅಥವಾ ಈ ಅಧಿನಿಯಮದ ಮೇರೆಗೆ ಸರ್ಕಾರಕ್ಕೆ ಪ್ರಾಪ್ತವಾಗುವ ಯಾವುದೇ ಕರ್ತವ್ಯವನ್ನು ನೆರವೇರಿಸುವ ಬಗ್ಗೆ ಯಾವುದೇ ಆರೋಪಿತ ಅಲಕ್ಷ್ಯ ಅಥವಾ ಲೋಪಕ್ಕೆ ಸಂಬಂಧಿಸಿದಂತೆ ಅಥವಾ ಸರ್ಕಾರಕ್ಕೆ ಈ ಅಧಿನಿಯಮದ ಮೂಲಕ ಪ್ರದಾನ ಮಾಡಿದ ಯಾವುದೇ ಅಧಿಕಾರವನ್ನು ಚಲಾಯಿಸುವುದಕ್ಕೆ ಅಥವಾ ಅದನ್ನು ಚಲಾಯಿಸಲು ತಪ್ಪುವುದಕ್ಕೆ ಸಂಬಂಧಿಸಿದಂತೆ ಸರ್ಕಾರದ ವಿರುದ್ಧ ಯಾವುದೇ ದಾವೆಯನ್ನು ಹೂಡತಕ್ಕುದಲ್ಲ ಮತ್ತು ಧರ್ಮಾರ್ಥ ಉದ್ದೇಶಕ್ಕಾಗಿನ ನ್ಯಾಸಕ್ಕೆ ಒಳಪಟ್ಟಿಲ್ಲದ ಕಾರಣದ ಮೇಲೆ ಸ್ವತ್ತನ್ನು ಧರ್ಮಾರ್ಥ ದತ್ತಿಗಳ ಖಜಾಂಚಿಯಿಂದ ತಪ್ಪಿಸುವುದಕ್ಕಾಗಿ ಅಥವಾ ನಷ್ಟ ಅಥವಾ ದುರ್ವಿನಿಯೋಗವು ಅವನ ಬುದ್ಧಿ ಪೂರ್ವಕ ನಿರ್ಲಕ್ಷತೆ ಅಥವಾ ತಪ್ಪಿತದಿಂದ ಅಥವಾ ಅದರ ಮೂಲಕ ಉಂಟಾಗಿರುವಲ್ಲಿ, ಅವನಲ್ಲಿ ನಿಹಿತವಾದ ಯಾವುದೇ ಸ್ವತ್ತು ಅಥವಾ ಅದರ ಆದಾಯದ ನಷ್ಟ ಅಥವಾ ದುರ್ವಿನಿಯೋಗಕ್ಕಾಗಿ

ಅವನ ಮೇಲೆ ಆಪಾದನೆ ಮಾಡುವುದಕ್ಕಾಗಿ ಅಥವಾ ಅದರ ಬಗ್ಗೆ ಜವಾಬ್ದಾರನನ್ನಾಗಿಸುವುದಕ್ಕಾಗಿ ಅಲ್ಲದೆ ಅವನ ವಿರುದ್ಧ ಯಾವುದೇ ದಾವೆಯನ್ನು ಹೊಡತಕ್ಕುದಲ್ಲ.

**15. ಅಡ್ವೋಕೇಟ್ ಜನರಲ್ ಮತ್ತು ಅಫಿಷಿಯಲ್ ಟ್ರಸ್ಟಿಗೆ ಸಂಬಂಧಿಸಿದಂತೆ ಉಳಿಸುವಿಕೆ** .- ಈ ಅಧಿನಿಯಮದಲ್ಲಿರುವುದು ಯಾವುದನ್ನೂ, ಯಾವುದೇ ದಾನಕ್ಕೆ ಸಂಬಂಧಿಸಿದಂತೆ ಕಾರ್ಯ ನಿರ್ವಹಿಸಲು ಅಡ್ವೋಕೇಟ್ ಜನರಲ್ಲನ ಅಧಿಕಾರಕ್ಕೆ ಸಂಬಂಧಿಸಿದಂತೆ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೂ, ಅಧಿನಿಯಮಿತಿಯ ಅಥವಾ ಅಫಿಷಿಯಲ್ ಟ್ರಸ್ಟಿಯಲ್ಲಿ ಧರ್ಮಾರ್ಥ ಉದ್ದೇಶಕ್ಕಾಗಿ ನ್ಯಾಸವಾಗಿ ಸ್ವತ್ತು ನಿಹಿತವಾಗುವುದಕ್ಕೆ ಸಂಬಂಧಿಸಿದಂತೆ ಅಫಿಷಿಯಲ್ ಟ್ರಸ್ಟಿಗಳ ಅಧಿನಿಯಮ, 1913ರ ಪ್ರವರ್ತನೆಯನ್ನು ದುರ್ಬಲಗೊಳಿಸುವುದೆಂದು ಅರ್ಥೈಸತಕ್ಕುದಲ್ಲ.

**16. ಗೌವರ್ನರ್ ಜನರಲ್ ಇನ್ ಕೌನ್ಸಿಲ್ಲನ ಸಾಮಾನ್ಯ ನಿಯಂತ್ರಣ ಅಧಿಕಾರ.**- ಪ್ರಾಪ್ತಿ ಅಧಿನಿಯಮ (1920ರ 38)ರ 2ನೇ ಪ್ರಕರಣ ಮತ್ತು 1ನೇ ಅನುಸೂಚಿ, ಭಾಗ I ಇದರ ಮೂಲಕ ನಿರಸನಗೊಂಡಿದೆ.

* * * *